20) ಶೌರ್ಯ ಮತ್ತು ಶೌರ್ಯೋತ್ತರ ಪ್ರಶಸ್ತಿ : ಕರ್ನಾಟಕ ರಾಜ್ಯದ ಖಾಯಂ ನಿವಾಸಿಗಳಾದ ಶೌರ್ಯ ಮತ್ತು ಶೌರ್ಯೋತ್ತರ ಪ್ರಶಸ್ತಿ ವಿಜೇತರಿಗೆ ನಗದು ಅನುದಾನಗಳನ್ನು ನೀಡಲಾಗುವುದು.

21) ಜೈ ಜವಾನ್ ಸ್ಟಾಲ್ : ನಗರ ಪಾಲಿಕೆ ಮತ್ತು ಪುರ ಸಭೆಗಳಿಂದ 10 ಮತ್ತು 10 ಅಡಿ ಅಗಲದ ನಿವೇಶನಗಳನ್ನು ಅಂಗವಿಕಲ ಯೋಧರಿಗೆ ಜೈ ಜವಾನ್ ಸ್ಟಾಲ್ ತೆರೆಯಲು ಮಂಜೂರು ಮಾಡಲು ಆದೇಶವಿದೆ. 3-4 ವರ್ಷಗಳಿಂದ ಇಂತಹ ನಿವೇಶನಗಳನ್ನು ನೀಡಿರುವುದಿಲ್ಲ.

22. ಪ್ರಪಂಚದ 2ನೇ ಮಹಾಯುದ್ಧದಲ್ಲಿ ಭಾಗವಹಿಸಿದ ಪಿಂಚಣಿ ಇಲ್ಲದೆ ಬಿಡುಗಡೆಯಾದ ಮಾಜಿ ಸೈನಿಕರಿಗೆ ಮತ್ತು ಅವರ ವಿಧವೆಯರಿಗೆ ಕೆಲವು ನಿಭಂದನೆಗೊಳಪಟ್ಟು ಮಾಸಿಕ ರೂ. 300.00 ರಂತೆ ಗೌರವಧನ ಪಾವತಿ.

ಇವುಗಳಲ್ಲದೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಗಳ ವಿಶೇಷ ನಿಧಿ ಹಾಗೂ ಕಲ್ಯಾಣ ನಿಧಿಯಿಂದ ಈ ಕೆಳಗಿನ ಸೌಲಭ್ಯ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

(1) 56 ಯುದ್ಧ ವಿಧವೆಯರಿಗೆ ವಾರ್ಷಿಕ ನಿರ್ವಹಣ ಅನುದಾನ ರೂ. 2500.00 ರಂತೆ ನೀಡಲಾಗುವುದು.

(2) ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ವಯಂ ಉದ್ಯೋಗಕ್ಕಾಗಿ ಪಡೆದ ಸಾಲದ ಮೇಲಿನ ಬಡ್ಡಿ ರಿಯಾಯಿತಿ.

(3) ಕನ್ನಡಕ ಶ್ರವಣ ಸಾಧನಗಳಿಗೆ ಅನುದಾನ.

(4) ಮಾಜಿ ಸೈನಿಕರಿಗೆ ತುರ್ತು ಧನ ಸಹಾಯ

(5) ಮಾಜಿ ಸೈನಿಕರು ಮರಣ ಹೊಂದಿದಾಗ ಅವರ ವಿಧವೆ ಅವಲಂಬಿತರಿಗೆ ಮರಣ ಪರಿಹಾರ ಧನ ಸಹಾಯ

(6) ಬಡವರಾದ ಮಾಜಿ ಸೈನಿಕರಿಗೆ ಅವರ ಅವಲಂಬಿತರಿಗೆ ವಾರ್ಷಿಕ ಧನಸಹಾಯ.

(7) ಪಿಂಚಣಿದಾರರಲ್ಲದ ಮಾಜಿ ಸೈನಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ.

ವರಾಹಿ ಏತ ನೀರಾವರಿ ಯೋಜನೆಯಲ್ಲಿನ ಅವ್ಯವಹಾರ

320 - ಶ್ರೀ ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ವರಾಹಿ ಏತ ನೀರಾವರಿ ಯೋಜನೆಯಲ್ಲಿ ಬಹಳಷ್ಟು ಅವ್ಯವಹಾರ ಆಗಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ವರಾಹಿ ಯೋಜನೆಯ ಈ ಅವ್ಯವಹಾರವನ್ನು ತನಿಖೆ ನಡೆಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಉಸ್ತುವಾರಿ ಸಚಿವರ ಉಪಸ್ಥಿತಿಯಲ್ಲಿ ನಿರ್ಣಯದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ವಿಷಯಗಳಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಇಲ್ಲ

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.